Regd No B G 155

ಸತ್ಯವಾದಿ

29—9—1965

49th Year
Satyavadi
DAILY
MYSORE 4

ಸಂಸ್ಥಾಪಕರು — ಅರವಿ.ನೆ ಸಿಂಸ್ಕೇದಾರ್ ಎಂ ಎ ಸುಬ್ಬರಾಯುರು ಸಂಪಾದಕರು — ಧರ್ಮಪ್ರಜಾರನಿಂತ ಎಂ ಎಸ್ ಕೃಷ್ಣರಾವ್ 2 ಪೈಸೆ

ಮೈಸೂರು ವಾರ್ತಾ ಇಲಾಖೆಯ ಡುಂದುಗಾರಿಕೆ !

★

' ಕಂಡದ್ದನ್ನು ಹೇಳಿದರೆ ಕೆಂಡದಂತಹ ಕೋಪ 'ಅನ್ನುತ್ತಾರೆ , ಈಗಕಂಡದ್ದನ್ನು ಹೇಳುತ್ತೇವೆ ; ವಾರ್ತಾ ಇಲಾಖೆಯ ಡೈರೆಕ್ಟರು ಶ್ರೀ ಶಾಂತೇಸ ಪಾಟೀಲರಿಗೆ ಮುಖ ಉರಿ ಎನ್ನುತ್ತದೆ, ಕೆಂಡವಾಗುತ್ತಾರೆ

ವಾರ್ತಾ ಇಲಾಖೆಯ ಸಿಬ್ಬಂದಿ ಎಂದರೆ ವಿಚಿತ್ರವಾಂದೆ ; ಇದರೆ ಕೆಲಸ ಮಾತ್ರ ಅಷ್ಟಕ್ಕಷ್ಟೆ : ಈಗ ನಡೆದಿರುವುದು ಸಾಕಾಲದೆ |

ಬೆಂಗಳೂರಿನಿಂದ ಕಾಂಗ್ರೆಸ್ ನಾಯಕ ಶ್ರೀ ರಂಗನಾಥ ದಿವಾಕರ ಸಂಪಾದಕತ್ವದಲ್ಲಿ ಪ್ರಕಟವಾಗುವ 'ಸಂಯುಕ್ತ ಕರ್ನಾಟಕ' ದ ಈ ತಿಂಗಳ 22 ನೇ ತಾರೀಖಿನ ಸಂಚಿಕೆಯನ್ನು ನೋಡಿ : ಮೈಸೂರು ಹೌಸಿಂಗ್ ಬೋರ್ಡಿನ ಜಾಹಿರಾತು ಪ್ರಕಟವಾಗಿದೆ ; ಜಾಹಿರಾತು ಇತ್ತೀಚೆಗೆ ಶ್ರೀ ಶಾಂತೇಸ ಪಾಟೀಲ್ ಮುಖ್ಯಾಧಿಕಾರಿತ್ವವುಳ್ಳ ರಾಜ್ಯದ ವಾರ್ತಾ ಇಲಾಖೆ, ದೊಡ್ಡ ಜಾಹಿರಾತು : ಜಾಹಿರಾತು ಪ್ರಕಟಿಸಿಕೊಡಲು ಸ್ವೀಕರಿಸಲು 21—9—65 ನೇ ತಾ || 4 ಗಂಟೆ ಕಡೆಯ ಅವಧಿ : ಜಾಹಿರಾತು 22 ನೇ ತಾ || ಸಹ ಪ್ರಕಟವಾಗಿದೆ.

ಈ ಉಳಿತಾಯ ಮಾಡಬೇಕೆಂದು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೂ ಹಣಕಾಸಿನ ಮಂತ್ರಿ ಮುಖ್ಯ ವಾರ್ತಾ ಇಲಾಖೆಯ ಖರ್ಚನ್ನು ಹೊಂದಿರುವ ಶ್ರೀ ರಾಮಕೃಷ್ಣ ಹೆಗ್ಡೆಯವರೂ ಸಾರಿ ಸಾರಿ ಹೇಳುತ್ತಿರುವಾಗ ಶ್ರೀ ಶಾಂತೇಸ ಪಾಟೀಲರ ಮುಖ್ಯಾಧಿಕಾರಿತ್ವವುಳ್ಳ ವಾರ್ತಾ ಇಲಾಖೆಯು ಆಗಿಹೋದ ಕಾರ್ಯದ ಜಾಹಿರಾತು ಇತ್ಯಾದಿಯಾಗಿ ಮಾಡಬಹುದೇ ?

❀

ಪಾಂಚಭೌತಿಕ

ಮೈಸೂರು— ಮುನಿಸಿಪಾಲಿಟಿಯು ಗಾಂಧಿ ಜಯಂತಿ ಸಪ್ತಾಹಾರಂಭದಲ್ಲಿ ಅಕ್ಟೋಬರು 2 ರಿಂದ 9 ರವರೆಗೆ ಆರೋಗ್ಯ ಸಪ್ತಾಹ ನೆರವೇರಿಸುವುದು.

★

ಕಾರ್ಪೊರೇಟರ್ ಬಂಧನ

ಬೆಂಗಳೂರು— ರಕ್ಷಣಾ ವಿಧಿ ಪ್ರಕಾರ ಮಂಗಳವಾರ ಬಂಧಿಸಲ್ಪಟ್ಟ 4 ಮುಸ್ಲಿಂರ ಪೈಕಿ ಕಾರ್ಪೊರೇಟರು ಸಯ್ಯದ್ ಅಹಮದರೂ ಒಬ್ಬರು.

❀

ಸತ್ಯ ವಾರ್ತೆ ತಿಳಿಸಲಿಲ್ಲ

ಕೊಯಮತ್ತೂರಿನ ಒಬ್ಬ ಮುಸ್ಲಿಂ ಮಹಿಳೆಯು ಗಂಡ ಈಚೆಗೆ ಸತ್ತ : ಮಗ ಪಾಕಿಸ್ತಾನದ ನಿಂದ್ದ ಲಾಹೋರಿನಲ್ಲಿ ಕಾದಾಡುತ್ತಿದ್ದಾನೆ : ಅವನಿಗೆ ತೊಂದರೆಯಾಗದಿರಲು ಈಕೆ ಅವನಿಗೆ ತಂದೆ ಸತ್ತ ವಾರ್ತೆಯನ್ನು ತಿಳಿಸಲಿಲ್ಲ

❀

ಕ್ಷಾಮ ಪ್ರದೇಶ

ಕಡೂರು ತಾಲ್ಲೂಕನ್ನು ಕ್ಷಾಮ ಪೀಡಿತವೆಂದು ಘೋಷಿಸಬೇಕೆಂದು ತಾಲ್ಲೂಕು ಬೋರ್ಡು ಅಧ್ಯಕ್ಷ ಶ್ರೀ ಚಂದ್ರೇ ಗೌಡರು ಹೇಳಿದರು

★

ವಿಧವೆಯ ಬಿದಾರ್ಡ

ಬೊಂಬಾಯಿ— 15 ದಿನಗಳ ಹಿಂದೆ ಗುಡನನ್ನು ಕಳೆದುಕೊಂಡ ಮಂಜುಳ ನಾಯಕ್ ಅವರ ಶಾದ್ಧ ಮುಂತಾದವುಗಳಿಗಿಟ್ಟುಕೊಂಡಿದ್ದ ರೂ 1001 ನ್ನು ರಕ್ಷಣಾ ನಿಧಿಗೆ ಕೊಟ್ಟಳು.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಧಕ್ಷ, ಜ್ಯೋತಿರ್ವಿದ್ವನ್ಮಣಿ
ಸಂಪಶ್ಯ ಕೃಷ್ಣಜೋಯಿ ಸಂವರಂದ

30 ಗುರುವಾರ ಪಂಚಮಿ ಉತ್ತರಾಭಾದ್ರ

ಎಲ್ಲ ವಿರೋಧ ಪಕ್ಷಗಳೂ ಒಬೆಯಿಂದ ಹೊರದೂಡಲ್ಪಟ್ಟರು

❀

ಸ್ಮರಣಾರ್ಥ ದಿನ

ನವದೆಹಲಿ— ಅಕ್ಟೋಬರ 2 ಗಾಂಧೀ ಜಯಂತಿಯನ್ನು ದೇಶದ ರಕ್ಷಣಾ ಕಾರ್ಯದಲ್ಲಿ ಮಡಿದ ಮತ್ತು ಗಾಯಗೊಂಡವರ ಸ್ಮರಣಾರ್ಥ ದಿನವಾಗಿ ಆಚರಿಸಲು ರಾಷ್ಟ್ರಾಧ್ಯಕ್ಷ ಡಾ || ರಾಧಾಕೃಷ್ಣನರು ರಾಷ್ಟ್ರಕ್ಕೆ ಕರೆಯಿತ್ತಿರುವರು.

ಮುಸ್ಲಿಂರ ಬೆಂಬಲ

ತಿರುವೆಂಡ್ರಂ— ಪಾಕಿಸ್ತಾನದ ಆಕ್ರಮಣ ಕಾರ್ಯವನ್ನು ಪ್ರತಿಭಟಿಸಿ ಭಾನುವಾರ 10 ಸಾವಿರ ಮುಸ್ಲಿಂರು ಪೆರವಣಿಗೆ ನಡೆಸಿದರು

ಹಸಿಕೂಡಿದರೆ ಹಲ್ಲು

ಗಾಮಾ (ಶಿಕಾರಿಪುರ) — ಪಟೇಲ್ ದೊಡ್ಡಬೂ ಗವಯ್ಯ ಮತ್ತು ವಕ್ಕಲ ವೀರಪ್ಪನವರು ಒಂದು ವರ್ಷದ ಹಿಂದೆ ಒಂದು ಪಣ ಮಾಡಿ, ಅದರಂತೆ, ಊರಿನ ಪ್ರತಿ ಮನೆಯಿಂದಲೂ ಒಂದು ಹಿಡಿ ಅಕ್ಕಿ ಶೇಖರಿಸಿದರು . 10 ತಿಂಗಳಲ್ಲಿ ಶೇಕರಿಸಿದ ಅಕ್ಕಿಯನ್ನೆಲ್ಲಾ ಮಾರಿ 1500 ಗಳನ್ನು ಮಾಡಿದರು ; ಅದರಲ್ಲಿ ರಕ್ಷಣಾ ನಿಧಿಗೆ ರೂ 101 ಕೊಟ್ಟರು ; ಉಳಿದ್ದನ್ನು ಊರಿನ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲಾಗುವುದು

ವಿಶ್ವ ಹಿಂದೂ ಮಹೀಯ ಸಮ್ಮೇಳನ

ಲಕ್ನೋ ವಾರ್ತೆಯಂತೆ, ಅಲಹಾಬಾದಿನಲ್ಲಿ ಮುಂದಿನ ಜನವರಿ 22—23 ರಲ್ಲಿ ನಡೆಯುವ ವಿಶ್ವ ಹಿಂದೂ ಮಹೀಯ ಸಮ್ಮೇಳನದ ಅಧ್ಯಕ್ಷತೆಯನ್ನು ಪೈಸೂರು ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರು ವಹಿಸುವರು.

ಎಲ್ಲ ವಿರೋಧ ಪಕ್ಷಗಳೂ ಒಬೆಯಿಂದ ಹೊರದೂಡಲ್ಪಟ್ಟರು

ಲಕ್ನೋ— ಭೂಕಂದಾಯ ಮಸೂದೆಗೆ ತಿದ್ದುಪಡಿಗೆ ವೇಳೆ ಕಾರ್ಯ ಸರ್ಕಾರವನ್ನು ವಿಧಿಸುವ ಮಸೂದೆಯನ್ನು ಶಾಸನ ಸಭೆಯಲ್ಲಿ ತಂದ ದಿನ ಪ್ರತಿಭಟಿಸಿ ಮುಂಚಾಗಲಾಟೆಯಾಯಿತು - 130 ಕ್ಕೂ ಹೆಚ್ಚು ವಿರೋಧೀ ಪಕ್ಷದ ಸದಸ್ಯರನ್ನು ಸಭೆ ದಿಟ್ಟು ಹೋಗುವಂತೆ ಸ್ಪೀಕರರು ತಿಳಿಸಿ, ಮಾರ್ಷಲ್‌ಗಳಿಂದ ಹೊರದೂಡಲ್ಪಟ್ಟರು.

★

ಕದನ ವಿರಾಮ

ನವದೆಹಲಿ— ಭಾರತ-ಪಾಕಿಸ್ತಾನಗಳ ನಡುವೆ ಸಶಸ್ತ್ರ ಸೇನೆಗಳ ವಾಪಸ್ಸಾಗುವ ಒಪ್ಪಂದವಾಗದಿದ್ದರೆ, ಈಗ ಹಂಗಾಮಿಯಾಗಿರುವ ಕದನ ವಿರಾಮ ರೇಖೆಯೇ ಖಾಯಂ ಆಗಬಹುದು.

★

ಗ್ರಾಮವನ್ನು ಸುಟ್ಟರು

ಜಾಂಬು- ಜೋರಿಯರ್ ವಿಭಾಗ— ಈ ವಿಭಾಗದಲ್ಲಿ ಪಾಕಿಸ್ತಾನದ ಆಕ್ರಮಣದಲ್ಲಿರುವ ಭಾರತ ಗ್ರಾಮಗಳನ್ನು ಪಾಕಿಸ್ತಾನೀ ಪಡೆಗಳು ಸುಟ್ಟಿವೆಯಾಕಿನೆ ; ಅಲ್ಲಿನ ಆಸ್ತಿಪಾಸ್ತಿಗಳನ್ನು ಲೂಟಿಮಾಡಿ ಸುಮಾರು 50 ಭಾರತ ಗ್ರಾಮಗಳು ಪಾಕಿಸ್ತಾನದ ಆಕ್ರಮಣದಲ್ಲಿದೆ : ಅಲ್ಲಿನ ಜನರೆಲ್ಲಾ ಮುಂಚೆಯೇ ಹೊಂಟುಹೋಗಿದ್ದಾರೆ.

★

ಬೆಂಗಳೂರು— ಆಹಾರ ಧಾನ್ಯ ಶೇಖರಣೆ ನೀತಿಯ ಕುರಿತ ಐದು ಅಜ್ಞೆಗಳನ್ನು ಸರಕಾರ ಹೊರಡಿಸಿದೆ

❀

ಮಾನಿಲ— ಟ್ರಾಲ್ ಅಗ್ನಿಪರ್ವತ ಸ್ಫೋಟದಿಂದ ತಪ್ಪಿಸಿಕೊಂಡು ಹೋಗುತ್ತಿದ್ದ 300 ಮಂದಿ ಅನ್ನ ನೀಗಿದರು.

ವೈಕುಂಠದಲ್ಲಿ ನೆಹರೂ ಸಂಬಂಧದ ಪ್ರದರ್ಶನ ಮತ್ತು ಜಲಚಿತ್ರ

ಇವಕ ಲಾಲ ನೆಹರೂ ಸಂಬಂಧಿಸಿದ ಪ್ರದರ್ಶನವು ವಸ್ತುಪ್ರದರ್ಶನ ಕಟ್ಟಡದಲ್ಲಿ ಅಕ್ಟೋಬರು 2 ರಿಂದ 9 ರವರೆಗೆ (ಎಂಡು ದಿನಗಳೂ ಸೇರಿ) ಏರ್ಪಡಿಸಲಾಗಿದೆ — ನೆಹರೂರವರ ಜೀವಿತ ಮತ್ತು ಕಾರ್ಯಗಳ ಕುರಿತ ಜಲನೆಚಿತ್ರವು ಸಂಜೆ 6-30 ರಿಂದ 7-30 ರವರೆಗೆ ಪ್ರದರ್ಶಿಸಲಾಗುವುದು — ಈ ಎಂಡಕ್ಕೂ ಪ್ರವೇಶ ಉಚಿತ

★

ಸರಿಯಾದ ಹೇಳಿಕೆ

ಬಿಜಾಪುರ 1 — ಹಲವಾರು ಯೋಜನೆ ನೇಲೆ ಬೇಕಾದಷ್ಟು ಹಣ ವ್ಯಯ ವಾಗುತ್ತಿದ್ದರೂ, ರಾಜ್ಯದ ಕೆಲವು ಸ್ಕೂಲುಗಳಲ್ಲಿ ಕನಿಷ್ಟ ಸೌಕರ್ಯಗಳೂ ಇಲ್ಲ ವಾಗಿದೆಯೆಂದು ವಿದ್ಯಾಭ್ಯಾಸ ಡೆ|| ಡೈರೆಕ್ಟರು ಹೇಳಿರುವರು — 11 ನೇ ಸ್ಟಾಂ ಡರ್ಡಿನವರೆಗೂ ಶಿಕ್ಷಣ ಕೊಡುತ್ತಿರುವ ಗುಲ್ಬರ್ಗಾ ಜಿಲ್ಲೆಯ ಒಂದು ಪೌಢ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಏನೂ ಸೌಕರ್ಯವಿಲ್ಲವೆಂದೂ, ಕೂತುಕೊಳ್ಳಲು ಬೆಂಚು ಕೂಡಾ ಇಲ್ಲದೆ ಹಿಂದಿನ ಗುರುಕುಲ ಪದ್ಧತಿಯಂತೆ ನೆಲದ ಮೇಲೆ ಕೂತುಕೊಳ್ಳುತ್ತಿರುವರೆಂದೂ ತಿಳಿಸಿದರು.

★

ಗಣಪತಿ ಹುಟ್ಟಿದೆ ! ಬಂದು ನಿನ್ನ ಸೇವೆ ಸಲ್ಲಿಸಿ !

ಶ್ರೀ ಬ್ರಹ್ಮ ಚೈತನ್ಯ ಪ್ರಸನ್ನ ಸೀತಾರಾಮ ಮಂದಿರ

೬ ನೇ ದಕ್ಷಿಣ ರಸ್ತೆ, ಶಿವಾಂಪೇಟೆ ಮೈಸೂರು

ಈ ವೇಳ್ಕಂಡ ರಾಮಮಂದಿರದಲ್ಲಿ ತಾ|| 13–8–65 ರಲ್ಲಿ ಕೆಸರಿ ಗಣಪತಿ ಸಚ್ಚಿನಾರಾಯಣ ಸ್ವಾಮಿಗಳು ಅನುಗ್ರಹಿಸಿರುವ ಭಸ್ಮದಿಂದ ಬಂದ ಲೋಟದಲ್ಲಿ ರತ್ನಗರ್ಭ ಗಣಪತಿ ಉದ್ಭವಿಸಿರುವುದನ್ನು ಸರ್ವರೂ ಬಂದು ದರ್ಶನಭಾಗ್ಯ ಪಡೆಯ ಬೇಕೆಂದು ಈ ಮೂಲಕ ವಿಜ್ಞಾಪಿಸಿಕೊಳ್ಳಲಾಗಿದೆ.

ದರ್ಶನ ಕಾಲ– ಬೆಳಿಗ್ಗೆ 7 ರಿಂದ 12 : ಸಾಯಂಕಾಲ 3 ರಿಂದ 7 ರವರೆಗೆ

ಕಾಶ್ಮೀರದಲ್ಲಿ ರಸ್ತೆಯ ಪಡೆಗಳ ಶ್ರಮ ಸಫಲ.

ವುಡಲಾಂಡ್ 24–9–65 ರಿಂದ

ಶಿ ಸು ಅಮೋಘ ಅಂಶ

ಆವೊ ಪ್ಯಾರ್ ಕರೆ (ಹಿಂದಿ)

ಶೆ

Aao Pyar Karen

ಜಾಯ್ ಮುಖರ್ಜಿ — ಸೈರಾ ಬಾನು ರವರ ಕಲಾತ್ಮಕ ನಟನೆ

ಆಕರ್ಷಣೀಯ ಅಭಿನಯದಿಂದ ಕೂಡಿದ ಸುಂದರ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 26–9–65 ರಿಂದ

ನವತಿ ಕುಮುಕು (ತೆಲುಗು)

ನಟವರ್ಗ— ಎಸ್ ಟಿ ರಾಮಾರಾವ್, ಸಾಹುಕಾರ್ ಜಾನಕಿ, ಗುಮ್ಮಡಿ, ರೇಲಂಗಿ

[ದಿನ 3 ಆಟಗಳು]

SHAKTI SUDHA

A Superb Tonic

Protect the Cow



ಗೋಸಂರಕ್ಷಣೆ ಮತ್ತು ಜೀವಾಣೆದಯೂ ಕಾರ್ಯಗಳು ಹೆಚ್ಚಾಗಿ ಸಡೆಯಲಿ

Edited, Printed & Published by Dharma prachara niratha
M S Krishna Rao (Proprietor) at the Satyavadi Press
Chamarajapuram, Mysore 4